ಆರಿಫ್, ದಾವಣಗೆರೆ

*ಹುಡುಗಿಯರು ಬೇಗನೆ ಮನಸೋಲುವುದು ಹುಡುಗರ ಯಾವ ಗುಣಕ್ಕೆ?*



ಕೋತಿಯಂತೆ ಹಲ್ಕಿರಿದು, ನಾಯಿಯಂತೆ ಹಿಂಬಾಲಿಸಿ, ಕತ್ತೆಯಂತೆ ಭಾರ ಹೊರುವ ತ್ರಿಪ್ರಾಣಿ ಗುಣಕ್ಕೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಸುಧಾ ಎಂದರೆ ಯಾರು? ಪುಲ್ಲಿಂಗವೋ, ಸ್ತ್ರೀಲಿಂಗವೋ ಎಂದು ತಿಳಿಯದೆ ಬೇಸರದಿಂದ ಇರುವವರಿಗೆ ನಿಮ್ಮ ಸಂದೇಶ?*

ಅದು ಬಹಳವೇ ಪುಲ್ಲಿಂಗ್ ಪವರ್ ಇರುವ ಸ್ತ್ರೀಲಿಂಗ!

ಆರ್. ಮಧುಸೂದನ್, ಹಾಸನ

*ಮದುವೆಯಾದ ಹುಡುಗ ತನ್ನ ಅಮ್ಮನ ಬದಲು ಹೆಂಡತಿಯನ್ನು ನಾಮಿನಿ ಅಂತ ಮಾಡುವುದು ಏಕೆ?*

ನೀವು ಸತ್ರೂ ಉಪಯೋಗ ಇಲ್ಲ ಅಂತ ಹೆಂಡತಿ ಬೈದೇ ಇರ್ಲಿ ಅಂತ!

ಆರ್. ನಾಗರಾಜ್, ಗೊರೂರು

*ಹೆಂಡತಿ ಅರ್ಧಾಂಗಿ; ಗಂಡ...?*

ಮೊದಮೊದಲು ಕಮಂಗಿ, ನಂತರ ನವರಂಗಿ!

ಸುನಂದ ಲೋಕೇಶರೆಡ್ಡಿ, ದಾವಣಗೆರೆ

*ಕೈಯಿಂದ ಕಮಲವನ್ನು ತೆಗೆದುಕೊಂಡು, ಹುಲ್ಲಿನ ಕಟ್ಟಿನಲ್ಲಿ ಕಟ್ಟಿ ಪಕ್ಕಕ್ಕೆ ಇರಿಸಿದರೆ ಹೇಗೆ ಸಾರ್?*



ತೆಂಗಿನಕಾಯಿ ಒಡೆದು, ಫ್ಯಾನ್ ಗಾಳಿಗೆ ಮೈಯೊಡ್ಡಿ ಕುಳಿತುಕೊಳ್ಳುವುದಕ್ಕಿಂತ ಇದು ವಾಸಿ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಬರೆದಿದ್ದನ್ನೆಲ್ಲಾ ನೆನಪಿನಲ್ಲಿಟ್ಟುಕೊಳ್ಳುವಂತಹ ಪೆನ್ನೇನಾದ್ರೂ ಇದ್ದಿದ್ರೆ ಹೇಗಿರ್‍ತಿತ್ತು ಸಾರ್?*

ನೀವು ಲವ್ ಲೆಟರ್ ಬರೆದ ಪೆನ್ ನಿಮ್ಮ ಪತ್ನಿಗೆ ಸಿಕ್ಕಿ ನಿಮ್ಮ ಜನ್ಮ ಜಾಲಾಡುವುದಾಗುತ್ತಿತ್ತು!

ಸಿ.ಅನಂತರಾವ್ ಹಿರೇಹಳ್ಳಿ, ಭರಮಸಾಗರ

*ಅತ್ಯಾಚಾರ ಮತ್ತು ಲಂಚಗಳಿಗೆ ಎಷ್ಟೇ ಕಠಿಣ ಶಿಕ್ಷೆ ವಿಧಿಸಿದರೂ ಇವುಗಳು ಹೆಚ್ಚಾಗುತ್ತಿರುವುದಲ್ಲಾ, ಕಾರಣವೇನು ಸಾರ್?*

ಅಪರಾಧಿಗಳು ಗಲ್ಲಿಗೆ ಹೋಗದಿದ್ದರೆ ಗಲ್ಲಿಗಲ್ಲಿಗೂ ಅಪರಾಧ!

ಪಿ.ಜೆ.ರಾಘವೇಂದ್ರ, ಮೈಸೂರು

*ಕನ್ನಡದಲ್ಲಿ ಲಿಪ್‌ಸ್ಟಿಕ್ ಗೆ ಏನೆಂದು ಕರೆಯಬಹುದು ರಾಮ್?*

ಓಷ್ಠರಾಗವರ್ಧಿನಿ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

*ಯಕ್ಷನಿಗೆ ಧರ್ಮರಾಯ ನೀಡಿದ ಉತ್ತರಕ್ಕೂ, ನಮಗೆ ನೀವು ನೀಡುವ ಉತ್ತರಕ್ಕೂ ಏನು ವ್ಯತ್ಯಾಸ?*

ಆ ಉತ್ತರಗಳಿಗೆ ವ್ಯಾಸನೇ ಬೇಕು; ಈ ಉತ್ತರಗಳಿಗೆ ಹವ್ಯಾಸ ಸಾಕು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ದೇವರು ಎಲ್ಲೆಡೆಯೂ ಇದ್ದರೂ ನಮ್ಮ ಜನಗಳು ಅವನನ್ನು ನೋಡಲು ಊರೂರು ಸುತ್ತುವುದೇಕೆ?*

ಆಮ್ಲಜನಕ ಎಲ್ಲೆಲ್ಲೂ ಇದ್ದರೂ ಐಸಿಯೂ ಸೇರಿ ಮೂಗಿಗೆ ಪೈಪ್ ತುರುಕಿಕೊಳ್ಳುವುದಿಲ್ಲವೇ! ಇದೂ ಹಾಗೆಯೇ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ತಾಯಿಯ ಪ್ರೀತಿಗೂ, ಹೆಂಡತಿಯ ಪ್ರೀತಿಗೂ ಏನು ವ್ಯತ್ಯಾಸ?*

ಒಂದು ಕಬ್ಬಿನಹಾಲು, ಇನ್ನೊಂದು ಬೆಲ್ಲ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಸಿಲ್ವರ್ ಸ್ಪೂನ್‌ನಲ್ಲಿ ತಿಂದು, ಗೋಲ್ಡನ್ ಚೇರ್‌ನಲ್ಲಿ ಕೂತು, ಬಿಸ್ಲೇರಿ ವಾಟರ್‌ನಲ್ಲಿ ಬಾತ್ ಮಾಡುವವರ ಬಗ್ಗೆ ನಿಮ್ಮ ಅನಿಸಿಕೆ?*

ಐರನ್ ಡೋರ್ ಹಿಂದೆ, ಗ್ರಾನೈಟ್ ಬೆಡ್ ಮೇಲೆ ಮಲಗಿ, ವೃಷಭಾವತಿ ನೀರಲ್ಲಿ ಮೀಯಬೇಕಾದೀತು ಜೋಕೆ!

ಜಿ.ಮಂಜುನಾಥ್, ಬಳ್ಳಾರಿ

*ನಾನು ಬರೆದ ಪ್ರೇಮಪತ್ರಗಳೆಲ್ಲಾ ಅವಳಿಗೆ ರದ್ದಿ ಕಾಗದಗಳಂತಾಗಿವೆಯಲ್ಲಾ..?*

ಅವಳಿಗೆ ಎಂದಿರೇ? ಟ್ವಿನ್ಸಾ? ಸರಿಹೋಯ್ತು; ಇಬ್ಬಿಬ್ಬರಿಗೆ ಪ್ರೇಮಪತ್ರ ಬರೆದರೆ ರದ್ದಿಯಲ್ಲದೆ ಇನ್ನೇನಾದೀತು ಬಿಡಿ!

## ಬಹುಮಾನಿತ ಪ್ರಶ್ನೆ

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಮೊಮ್ಮಗುವನ್ನು ನಾವೇ ನೋಡಿಕೊಳ್ಳುತ್ತೇವೆ, ನೀವಿಬ್ಬರೂ ಕೆಲಸಕ್ಕೆ ಹೋಗಿ ಎಂದು ಇತ್ತೀಚಿನ ಅತ್ತೆಮಾವಂದಿರು ಹೇಳಲು ಕಾರಣ...?*

ಆ ಕಾರಣಕ್ಕಾದರೂ ವೃದ್ಧಾಶ್ರಮಕ್ಕೆ ಕಳುಹಿಸದೆ ಮನೆಯಲ್ಲಿ ಇರಿಸಿಕೊಳ್ಳಲೆಂದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಸಾವಿನ ಬಾಗಿಲಲ್ಲಿ ನಿಂತೂ ಬದುಕನ್ನು ಬಯಸುವವರಿಗೆ ಏನೆನ್ನ ಬೇಕು?*

ರಿಮಾರ್ಕಬಲ್ ಮಾರ್ಕಂಡೇಯ!

ಎಂ.ಸಿ.ಜಯಕಾಂತ, ಮೈಸೂರು

*ಅತ್ಯಾಚಾರ ಪದವನ್ನು ವಿಗ್ರಹಿಸಿದರೆ ಅತಿ +ಆಚಾರ ಎಂದಾಗುತ್ತದಲ್ಲ!?*

ಅದು ಅತಿ ಅತಿಯಾಗಿ + ಆ ಎಲ್ಲ ಕಡೆಯಿಂದಲೂ + ಚಾರ– ಬಂಧಿಸುವುದು ಎಂದೂ ಆಗುತ್ತದೆ!

ಶಿಲ್ಪಿ ರಮೇಶ್, ಹನುಮನಾಳು

*ಬಾರದ ಲೋಕಕ್ಕೆ ತೆರಳಿದವರನ್ನು ಮತ್ತೆ ಹುಟ್ಟಿ ಬಾ ಎನ್ನುತ್ತಾರೆ. ಹುಟ್ಟಿ ಬಂದರೆ ಗುರುತಿಸುವವರು ಯಾರು ರಾಮ್?*




ಪುನರ್ಜನ್ಮ ಕಾರ್ಯಕ್ರಮದವರು!

ಜಿ.ಎನ್. ಪ್ರಸನ್ನಕುಮಾರ್, ತುಮಕೂರು

*ರಾಜಕಾರಣಿಗಳಿಗೂ ನಿವೃತ್ತಿ ವಯಸ್ಸು ಜಾರಿಗೊಳಿಸಿದರೆ ರಾಜಕೀಯ ವ್ಯವಸ್ಥೆ ಸುಧಾರಿಸಬಹುದಾ?*

ನೀವೂ ಸರಿಯೇ! ಸುಳ್ಳು ಆಸ್ತಿ ಘೋಷಣೆ ಮಾಡುವವರಿಗೆ ಸುಳ್ಳು ವಯಸ್ಸು ಘೋಷಣೆ ಮಾಡುವುದು ಕಷ್ಟವೇ?

ಬಿ.ಎನ್. ರೇಖಾ ರತ್ನಾಕರ ಭಟ್, ಕಳಸ

*ಇತ್ತೀಚೆಗೆ ದೇವಸ್ಥಾನಗಳಲ್ಲಿ ಏಕೆ ಚಪ್ಪಲಿ ಕಳ್ಳತನವಾಗುತ್ತಿದೆ? ಆಗ ದೇವರು ಎಲ್ಲಿರುತ್ತಾನೆ?*

ಅವರಿವರಿಗೆ ಎಸೆಯಕ್ಕೆ ಬೇಕಾಗತ್ತೇಂತ! ದೇವನೇನು ಮಾಡಿಯಾನು; ದೇವನೊಬ್ಬನಿರುವ ಅವನೆಲ್ಲೋ ನೋಡುತಿರುವ.

■ ರಾಮ್